BKN-01

Sl.No. :

Total No. of Pages : 3

ಪ್ರಥಮ ವರ್ಷದ ಬಿ.ಎ./ಬಿ.ಕಾಂ. ಪದವಿ ಪರೀಕ್ಷೆ, ಮೇ/ಜೂನ್- 2025

(SLM Scheme)

ಕನ್ನಡ ಭಾಷೆ (ಪತ್ರಿಕೆ–1)

ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು, ಪ್ರಬಂಧ ಮತ್ತು ಆಡಳಿತ ಕನ್ನಡ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ.*

ವಿಭಾಗ–ಎ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು) (20 ಅಂಕಗಳು)

ಪ್ರ1) ಎರಡರ ಭಾವವನ್ನು ಸಂದರ್ಭ ಸಹಿತ ವಿವರಿಸಿ: **[2×4=8]**

೧) ಭಗವಂತನೆ ಸರ್ವೋತ್ತಮ ಸಾಮಾನ್ಯನ್;
ಸಾಮಾನ್ಯನೆ ಸರ್ವೋತ್ತಮ ಶ್ರೀಮಂತನ್!
ಆತನೆ ಒರ್ವನ್, ಆತನೆ ಸರ್ವನ್,
ಸರ್ವಾತ್ಮನ್ ತಾನ್ ಸರ್ವಾನನ್ಯನ್!

ಅಥವಾ

ಇವಳೆನಗೆ ಸರ್ಪಗಾವಲು, ಹೊಸಿಲದಾಟಿದರೆ
ಬಾಗಿಲಿಗೆ ಬಂದು ಕಾಡುವಳು.....ಸಂಜೆಯ ತನಕ
ತಾಯ ಬಳಿ ಇವಳ ಅಧಿಕಾರ ನಡುರಾತ್ರಿಯಲಿ
ನನ್ನದೆಗೆ ಇವಳು ದೇವರ ಪದಕ

೨) "ಅನಾಯಾಸವಾಗಿ ದೊರೆತ ಇಂತಹ ಸಮಾಜ ಸುಧಾರಣೆಯ ಪ್ರಸಂಗವನ್ನು ಕಳೆದುಕೊಂಡರೆ ನನ್ನ ತಂದೆಯ ಮನೆಗೆ ಕಳಂಕನಾಗುವೆ"

ಅಥವಾ

ನಿನಗ ಬುಡ್ಡಾ ಬುಡ್ಡಾ ಅನ್ನರು
ಹೆಣ್ಣ–ಗಿಣ್ಣ ಆಗಿದ್ರ
ಹ್ರಾಂ.....ಹ್ರೀಂ.....ಹ್ರೂಂ ಅಂದು
ಟಿಂಗರ ಬುಡ್ಡಾ
ಅನ್ನಬೇಕು.

ಪ್ರ2) ಎಂಟು ಪದಗಳಿಗೆ ಅರ್ಥ ಬರೆಯಿರಿ: **[8×½=4]**

ದೀಕ್ಷೆ, ಕಮ್ಮಾರ, ಕದ, ಶುಕ, ಕಾಪರ, ತಾಲೀಮು, ತ್ರಾಸ, ಹವೆ, ಕೂಸು, ಚಿತೆ, ಪಟಗ, ಖಲಾಸ್.

ಪ್ರ3) ಯಾವ ಪಠ್ಯವನ್ನು ಬಿಡದೆ ನಾಲ್ಕಕ್ಕೆ ಸಂದರ್ಭ ಸ್ವಾರಸ್ಯ ಬರೆಯಿರಿ: **[4×2=8]**

೧) ಎಲ್ಲಿ ನೆಲವನ್ನು ತಣಿಸಿ. ಜನಮನ ಹೊಲದ ಕಳೆ ಕಳೆ ಕಳೆವಳೋ

೨) ಯಾಕ ನೋಡತೀ ಮತ್ತ ಮತ್ತ ನೀ ಇತ್ತ?

೩) ತೊಲಗಿತು ನಿನ್ನಯ ನಾಯ್‌ಪಾಡು

೪) ಒಳ್ಳೆ ಹಂದಿ ಸಾವಸ ಆತು ಕಣೋ

೫) ಅನ್ನ ದೊರೆತಲ್ಲಿ ನಮ್ಮ ಛತ್ರ

೬) ಸುತ್ತ ಸೌದೆ ಹಾಕಿ ಸುಟ್ಟುಬಿಡೋಣ

ವಿಭಾಗ–ಬಿ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು) (30 ಅಂಕಗಳು)

ಪ್ರ4) ಎರಡು ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) ಅನಾಥೆಯ ಬದುಕಿನ ಗೋಳಿನ ದುರಂತ ಚಿತ್ರಣ ದುಃಖಸೇತು ಕವಿತೆಯಲ್ಲಿ ಹೇಗೆ ಅಭಿವ್ಯಕ್ತವಾಗಿದೆ? ವಿವರಿಸಿ.

ಅಥವಾ

"ನೀ ಹೀಂಗ ನೋಡಬ್ಯಾಡ" ಕವಿತೆಯಲ್ಲಿ ಶೋಕ ಭಾವನೆ ಹೇಗೆ ಅಭಿವ್ಯಕ್ತಗೊಂಡಿದೆ? ತಿಳಿಸಿ.

೨) 'ತೆರೆಗಳು' ನಾಟಕದಲ್ಲಿ ಕಿಟ್ಟಿ ಪಾತ್ರದ ವೈಶಿಷ್ಟ್ಯ ಮತ್ತು ಮಹತ್ವವನ್ನು ವಿವರಿಸಿ.

ಅಥವಾ

'ಟಿಂಗರ ಬುಡ್ಡಣ್ಣ' ನಾಟಕದ ವಸ್ತು, ಪಾತ್ರ ಮತ್ತು ಭಾಷೆಯ ಮಹತ್ವವನ್ನು ವಿಶದಪಡಿಸಿ.

ಪ್ರ5) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **[2×5=10]**

೧) 'ಕಾಲ ನಿಲ್ಲುವುದಿಲ್ಲ' ಕವಿತೆಯಲ್ಲಿ ಕಂಡುಬರುವ ಕಾಲ–ಪ್ರಕೃತಿ ಚಿತ್ರಣ.

ಅಥವಾ

ಡಾ. ಸಿದ್ದಲಿಂಗಯ್ಯ.

೨) ಹರಿಜನ್ವಾರ ನಾಟಕದ ಭಾಷೆ.

ಅಥವಾ

ರಾಮಶೆಟ್ಟಿ ಪಾತ್ರ.

ವಿಭಾಗ–ಸಿ

(ಪ್ರಬಂಧ ಮತ್ತು ಆಡಳಿತ ಕನ್ನಡ) (30 ಅಂಕಗಳು)

ಪ್ರ6) ಎರಡು ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) ವಿರಾಟಪರ್ವ ಪಾಂಡವರಿಗೆ ಹೇಗೆ ಒಂದು ಶುಭ ಸೂಚಕ ಪರ್ವವಾಗಿದೆ? ವಿವರಿಸಿ.

ಅಥವಾ

'ರುಚಿ' ಪ್ರಬಂಧದ ವಸ್ತು, ಪಾತ್ರ, ಭಾಷೆಯ ಮಹತ್ವವನ್ನು ವಿಶದಪಡಿಸಿ.

೨) ಆಡಳಿತ ಭಾಷೆ ಎಂದರೇನು? ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿರುವುದರ ಅಗತ್ಯ ಮತ್ತು ಉಪಯುಕ್ತತೆಯನ್ನು ತಿಳಿಸಿ.

ಅಥವಾ

ಕನ್ನಡ ಮತ್ತು ಬಹುಮಾಧ್ಯಮದ ಸಾಧ್ಯತೆಗಳ ಕುರಿತು ಬರೆಯಿರಿ.

ಪ್ರ7) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **[2×5=10]**

೧) ದಿವಾನಖಾನೆಯ ಅಂದಚೆಂದ.

ಅಥವಾ

ಕೀಚಕನ ಪಾತ್ರ ಚಿತ್ರಣ.

೨) ಅರೆ ಸರ್ಕಾರಿ ಪತ್ರ.

ಅಥವಾ

ಹುದ್ದೆಗಳ ಜಾಹೀರಾತು.

